**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿಸಿ ನಂ. 1041/2022**

| | | | |
|---|---|---|---|
| **ಹೆಸರು** | **:** | **ಶಿವಕುಮಾರ** | ಚಾ.ಸಾ. 2 |
| **ತಂದೆಯ ಹೆಸರು** | **:** | **ತಿಪ್ಪಣ್ಣ** | ಪ್ರಾ.ಸಾ. 3 |
| **ವಯಸ್ಸು** | **:** | **32 ವರ್ಷ** | **ದಿನಾಂಕಃ 23-07-2024** |
| **ಉದ್ಯೋಗ** | **:** | **ಕೂಲಿ** | |
| **ವಾಸಸ್ಥಳ** | **:** | **ಮುಕ್ರಾಂಬಾ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಆರೋಪಿ ನನಗೆ ಗೊತ್ತು. ಪ್ರಾ.ಸಾ. 1 ಮತ್ತು 2 ರವರು ಸಹ ನನಗೆ ಗೊತ್ತು. ಚಾಸಾ-4 ರಿಂದ 14 ರವರು ನನಗೆ ಗೊತ್ತು. ಶಿವಕುಮಾರ ತಂದೆ ವಿಠಲ ರವರು ನನಗೆ ಗೊತ್ತು. ಅವರು ಮೃತಪಟ್ಟಿರುತ್ತಾರೆ.

ಈಗ 2 ವರ್ಷಗಳ ಹಿಂದೆ ಮದ್ಯಾಹ್ನ 2 ರಿಂದ 3 ಗಂಟೆ ಸುಮಾರಿಗೆ ಚಾಸಾ-4 ರವರು ನನಗೆ ಶಿವಕುಮಾರ ರವರಿಗೆ ಗೌಡರ ಹೊಲದಲ್ಲಿ ವಿದ್ಯುತ ತಗಲಿರುತ್ತದೆ ಎಂದು ತಿಳಿಸಿರುತ್ತಾರೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಯಾರ ತಪ್ಪಿನಿಂದ ಘಟನೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

ಈಗ ನೋಡುತ್ತಿರುವ ನಿಪಿ-1 ರಲ್ಲಿ ನನ್ನ ಸಹಿಗಳು ಇವೆ. ನನ್ನ ಸಹಿಗಳನ್ನು ನಿಪಿ-1(ಎ) ಮತ್ತು ನಿಪಿ-1(ಬಿ) ಮತ್ತು ನಿಪಿ-1(ಸಿ) ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿರುವ ಕೈಬರಹ ನನ್ನದೇ. ಪೋಲಿಸರು ಹೇಳಿದಂತೆ ನಿಪಿ-1 ನ್ನು ನಾನ ಬರೆದಿದ್ದೇನೆ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಹೇಳಿಕೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ-**

ಶ್ರೀದೇವಿ ಗಂಡ ರಾಜಶೇಖರ ಪಾಟೀಲ ರವರ ಹೊಲದಲ್ಲಿ ಪಂಪ ಸೆಟ ಇತ್ತು ಎಂದರೆ ನನಗೆ

ಗೊತ್ತಿಲ್ಲ. ಸದರಿ ಪಂಪು 5 ವರ್ಷಗಳ ಹಿಂದೆ ಬಂದು ಬಿದ್ದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಹೊಲದಲ್ಲಿ ವಿದ್ಯುತ ಕಂಬದ ವೈರಗಳು ನೆಲಕ್ಕೆ ತಾಗುವಂತೆ ಅಂದಾಜು 3 ಫೀಟ ಅಂತರದಲ್ಲಿ ಜೋತ ಬಿದ್ದಿದ್ದವು ಎಂದರೆ ನನಗೆ ಗೊತ್ತಿಲ್ಲ. ಆಗ ನಾನು ಮತ್ತು ನಮ್ಮ ಊರಿನವರು ಆರೋಪಿಗೆ ಮೌಖಿಕವಾಗಿ ಹೇಳಿದ್ದರೂ ಸಹ ಆರೋಪಿಯ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ದಿನಾಂಕಃ 22-01-2022 ರಂದು ಸದರಿ ಹೊಲದಲ್ಲಿ ಮದ್ಯಾಹ್ನ 2-30 ಗಂಟೆ ಸುಮಾರಿಗೆ ಅಳುವ ಶಬ್ದ ಕೇಳಿ ನಾನು, ಪ್ರಾ,ಸಾ. 2, ಚಾಸಾ-4 ಮತ್ತು 5 ರವರು ಸೇರಿ ನೋಡಿದಾಗ ನಮ್ಮ ಊರಿನ ಶಿವಕುಮಾರ ತಂದೆ ವಿಠಲ ರವರಿಗೆ ವಿದ್ಯುತ ಶಾಕ ತಗಲಿ ಹೊಲದಲ್ಲಿ ಬದುವಿನ ಮೇಲೆ ಬಿದ್ದಿದ್ದು ಅವನ ಎಡಗೈ ರಟ್ಟೆ ಹಾಗೂ ಮುಂಗೈ ಮೇಲೆ ಚರ್ಮ ಸುಲಿದಿದ್ದು ಹಾಗೂ ಬಲಗೈ ಮುಂದೆ ಮೇಲ್ಬಾಗಕ್ಕೆ ಚರ್ಮ ಸುಲಿದಿದ್ದು ಸ್ಥಳದಲ್ಲಿಯೇ ಮೃತಪಟ್ಟಿದ್ದನು ಎಂದರೆ ನನಗೆ ಗೊತ್ತಿಲ್ಲ. ಅಲ್ಲೇ ಇದ್ದ ಪ್ರಾ.ಸಾ. 1 ರವರಿಗೆ ವಿಚಾರಿಸಿದಾಗ ಬೆಳಿಗ್ಗೆ 9 ಗಂಟೆಗೆ ನಾವು ಕಡತಿ ಪಡೆದ ಹೊಲದಲ್ಲಿ ಶಿವಕುಮಾರ ರವರು ನೀರು ಹಾಕಲು ಹೋದಾಗ ಬಹಳ ಸಮಯವಾಗಿ ಮನೆಗೆ ಬರದೇ ಇದ್ದಾಗ ನಾನು ಮತ್ತು ನನ್ನ ಹೆಂಡತಿ ಹೊಲಕ್ಕೆ ಬಂದು ನೋಡಿದಾಗ ನಮ್ಮ ಮಗನಿಗೆ ಕರೆಂಟ ತಗಲಿ ಮೃತಪಟ್ಟಿರುತ್ತಾನೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಈ ರೀತಿ ನಾನು ದಿನಾಂಕಃ 23-01-2022 ರಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯಹುನ್ನು ನಿಪಿ-5 ಎಂದು ಗುರುತಿಸಲಾಯಿತು.

ನಿನಿಪಿ-1 ರಲ್ಲಿರುವ ಸಂಗತಿಗಳು ನನಗೆ ಗೊತ್ತಿಲ್ಲ. ಪ್ರಾ.ಸಾ. 1 ರವರು ಹೇಳಿದಂತೆ ನಾನು ನಿಪಿ-1 ನ್ನು ಬರೆದಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ಗೊತ್ತಿದ್ದರೂ ಆರೋಪಿಯ ಮಾತುಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಜೆಡ್.ಹೆಚ್.ಪಿ. ವಕೀಲರಿಂದಃ- ಇಲ್ಲಾ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**